ಮೀನಿಗರ ಈ ಸಾಮೂಹಿಕ ಕ್ರಿಸ್ತಾಚರಣೆಯನ್ನು ಒಳೊಳಗೇ ಅಣಕಿಸುತ್ತಿದ್ದರು. ಹೊಸತಲೆಮಾರಿನ ಪ್ರಶಾಂತ ತಾನು ಓದಿದ ವಿದ್ಯೆಗೆ ಅನುಗುಣವಾಗಿ ಹುಡುಗರನ್ನು ಗುಂಪುಗೂಡಿಸಿಕೊಂಡು ನಾವು ಈ ಧರ್ಮದಲ್ಲಿ ಇರಬಾರದೆಂಬುದು ಸರಿಯೇ ಆದರೂ, ನಾವು ಹೋಗಬೇಕಾದ್ದು ಬೌದ್ಧ ಧರ್ಮಕ್ಕೆ. ನಮ್ಮೆಲ್ಲರ ದೈವ ಆಯ್ಕೆ ಮಾಡಿಕೊಂಡದ್ದು ಬೌದ್ಧ ಧರ್ಮವನ್ನ ಎಂದು ತನಗೆ ತಿಳಿದದ್ದನ್ನು ತನ್ನ ಬಾಲ್ಯ ಸ್ನೇಹಿತ ರಂಗನ ಸೇವಾಕೇಂದ್ರದ ಮುಂದೆ ಕೂತು ಹೇಳುತ್ತಿದ್ದರೆ, ಹಟ್ಟಿಯ ಸೂರಿ, ಜಗ, ಮಲ್ಲಿ ಕಣ್ಣರಳಿಸಿ ಕೇಳುತ್ತಿದ್ದರು. ವಯಸ್ಸಿನಲ್ಲಿ ಕಿರಿಯವನಾದ ಮಲ್ಲಿ, 'ಹೂಕಣ್ಣ ನಾವೀಗ ಕ್ರೈಸ್ತರು ಎಂದು ಹೇಳಿದರೂ ಕಟಿಂಗ್ ಶಾಪ್ ಪ್ರಭ ಮೊದ್ಲಿಂನಂಗೆ ಈಗ್ಲು ನೋಡ್ತನೆ, ಕಟಿಂಗ್ ಮಾಡಲ್ಲ ಹೋಗು ಅಂತಾನೆ' ಎಂದು ತನ್ನ ಸಂಕಟವೊಂದನ್ನ ಹೊರಹಾಕಿದ. ಅಂಬೇಡ್ಕರ್, ಬುದ್ಧನನ್ನು ನಗರದಲ್ಲಿ ಕಲಿತು ಬಂದಿದ್ದ ಪ್ರಶಾಂತನೂ ಒಮ್ಮೆ ಕಟಿಂಗ್ ಶಾಪ್ ಬಳಿ ಹೋದಾಗ ಇದೇ ಮಂಜೇಗೌಡರ ಕಂಕಳ ಕೂದಲು ತೆಗೆಯುತ್ತಿದ್ದ ಅದೇ ಪ್ರಭ, 'ಇಲ್ಲಿ ಆಗಲ್ಲ ನಡಿ ನಡಿ' ಎಂದು ಮುಂದಕ್ಕೆ ದಾರಿ ತೋರಿದ್ದು ನೆನಪಾಗಿ ಪ್ರಶಾಂತನೂ ಕಸಿವಿಸಿಗೊಂಡ. 'ಆ ಪ್ರಭ, ಮಂಜೇಗೌಡನಾದಿಯಾಗಿ ಊರೊಳ್ಳರೆಲ್ಲರಿಗೂ ಬುದ್ಧಿ ಕಲಿಸೋ ಸೌಭಾಗ್ಯ ನಮ್ಮ ರಂಗನ ಕೈಲೆ ಐತೆ, ಏನ್ಮಾಡ್ತಿಯ ನಮ್ಮ ಗಂಡು ಮನಸ್ಸು ಮಾಡ್ತಿಲ್ಲ' ಎಂದು ಅಂಗಡಿಯೊಳಗೆ ಕುರ್ಚಿ ಮೇಲೆ ಕೂತಿದ್ದ ರಂಗನನ್ನು ಓರೆಗಣ್ಣಲ್ಲಿ ನೋಡಿಕೊಂಡು ಸೂರಿ ತಮಾಷೆಗೆಂಬಂತೆ ಅಂದ. ಸೂರಿಯ ಮಾತು ಕೇಳಿ ಎಲ್ಲರ ಮುಖದಲ್ಲಿದ್ದ ಬಿಗುಮಾನ ಒಮ್ಮೆಲೆ ಸಡಿಲವಾದಂತಾಗಿ, ಮಲ್ಲಿ ಕಿಸಿಕ್ಕನೆ ನಕ್ಕನು. 'ಸೌಭಾಗ್ಯ' ಎಂಬ ಶಬ್ದ ರಂಗನ ಒಳಗನ್ನು ಕೆದಕಿತಾದರೂ, ಮುಖದಿಂದ ಯಾವ ಭಾವವನ್ನೂ ಪ್ರಕಟಿಸದೆ ಹಾಗೆ ಬಿಗುವಿನಲ್ಲೇ ಇದ್ದನು. ಒಂದಷ್ಟು ಕಾಲ ಹೀಗೆ ಪರಸ್ಪರ ಕಾಲೆಳೆದುಕೊಳ್ಳುತ್ತ, ಒಮ್ಮೊಮ್ಮೆ ಗಂಭೀರವಾಗುತ್ತ ಹರಟಿದ ಯುವಕರು ಅನಂತರ ಕೆಲಸ ನಿಮಿತ್ತ ಎಂದಿನಂತೆ ಚದುರಿದರು.

ರಂಗನನ್ನು ಉದ್ದೇಶಿಸಿ ತನ್ನ ಸ್ನೇಹಿತರು ಹೀಗೆ ಆಶಾವಾದವೊಂದನ್ನು ಪ್ರಕಟಿಸಲೂ ಒಂದು ಬಲವಾದ ಕಾರಣವಿತ್ತು. ರಂಗ, ಬೆಂಕಿಪುರ ಕಿರಿಯ ಶಾಲೆಯಲ್ಲಿ ಓದುವಾಗ ಪ್ರಶಾಂತನಿಗಿಂತ ಒಂದು ಹೆಜ್ಜೆ ಮುಂದೆಯೇ ಇದ್ದನು. ಮಂಜೇಗೌಡರ ಮಗಳು ಸೌಭಾಗ್ಯಳೂ ಇವರ ಸಹಪಾಠಿಯೇ. ಓದು ಆಟ ಪಾಟದಲ್ಲಿ ಅಷ್ಟೇನು ಚುರುಕಿಲ್ಲದ ಸೌಭಾಗ್ಯ, ಮಂಜೇಗೌಡರ ಮಗಳೆಂಬ ಕಾರಣಕ್ಕೆ ಮೇಷ್ಟ್ರುಗಳಿಂದ ಬೈಸಿಕೊಳ್ಳುವ ಹಲವು ಸಂದರ್ಭಗಳಲ್ಲಿ ರಿಯಾಯ್ತಿಗೆ ಪಡೆಯುತ್ತಿದ್ದಳು. ಓದು ಬರಹ ಎಲ್ಲದರಲ್ಲೂ ಚುರುಕಿದ್ದ ರಂಗ ಅವರ ಅಪ್ಪ ಚಲುವಯ್ಯನ ಬೀದಿ ಮೇಲೋಗಿ ಹಳೆ ಮೆಟ್ಟೊಲೆಯುವ ಕಾಯಕದಿಂದಾಗಿ ಒಮ್ಮೊಮ್ಮೆ ಅವಜ್ಞೆಗೆ ಈಡಾಗುತ್ತಿದ್ದ. ಊರೆಲ್ಲ ಹೇಗೆ ನೋಡಿದರೂ ಸೌಭಾಗ್ಯಳಿಗೆ ಮಾತ್ರ ರಂಗನ ಮೇಲೆ ಮೊದಲಿನಿಂದಲೂ ಒಂದು ತರಹದ ಆಕರ್ಷಣೆ. ಒಮ್ಮೆ ಎಸ್ಸೆಸ್ಸೆಲ್ಸಿಗೆ ಬಂದರೂ ಇಪ್ಪತ್ತರ ವರಗೆ ಮಗ್ಗಿ ಕಲಿತಿಲ್ಲವೆಂದು ಮೂಗಿಡಿದುಕೊಂಡು ಕೆನ್ನೆಗೆ ಬಾರಿಸುವ ಕೆನ್ನೆ ಪತಾಸ್ತ್ರವನ್ನು ಪಡೆದುಕೊಂಡಿದ್ದ ರಂಗ ಉಳಿದೆಲ್ಲ ಹುಡುಗರಿಗೆ ಬಾರಿಸಿಕೊಂಡು ಬಂದನಾದರೂ, ಸೌಭಾಗ್ಯಳಿಗೆ ಕೊಡುವುದನ್ನ ಗಣಿತದ ಮೇಷ್ಟ್ರ ನಯವಾಗಿ ತಡೆದಿದ್ದರು. ಆಗಷ್ಟೆ ಮೂಗು ಚುಚ್ಚಿಸಿಕೊಂಡಿದ್ದ ಗೌಡರ ಮಗಳು ಸೌಭಾಗ್ಯ, ರಂಗನ ಬೆರಳ ಸೋಕಿಗಾಗಿ ಕಾದಿದ್ದನ್ನ ಯಾರಿಗೂ ಪತ್ತೆ ಹಚ್ಚಲು ಆಗಿರಲಿಲ್ಲ. ಆದರೆ, ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದ ಕೊನೆಯ ದಿನ, ಯಾರೂ ಇಲ್ಲದ ಸಮಯ ನೋಡಿ ಸೌಭಾಗ್ಯ ಉಂಡೆ ಸುತ್ತಿ ಎಸೆದ ಪೇಪರ್‌ನಲ್ಲಿ ಹಲವು ಕಾಗುಣಿತಗಳ ದೋಷದೊಂದಿಗೆ ಇದೆಲ್ಲ ಬರೆಯಲ್ಪಟ್ಟಿತ್ತು.

ಆ ಪತ್ರ ನೋಡಿದ ರಂಗನಿಗೆ ಉಳಿದೆಲ್ಲ ಭಾವಗಳಿಗಿಂತ ದಿಗಿಲಾದದ್ದೆ ಹೆಚ್ಚು. ಅಂದು ಕೂಲಿ ಕೆಲಸದ ಮೇಲೆ ಊರು ಬಿಟ್ಟೋದವನು ಮತ್ತೆ ಬಂದದ್ದು ಮೇಷ್ಟ್ರೆ ತಾವಾಗೆ ಫಲಿತಾಂಶ ನೋಡಿ, 'ಒಳ್ಳೆ ಮಾರ್ಕ್ಸ್ ತೆಗೆದಿದ್ದೀಯ ಬಾರೊ, ಶಹಭಾಷ್' ಎಂದು ಕರೆಸಿಕೊಂಡಾಗಲೇ. ಇಡೀ ಊರಿಗೆ